

## ರಾಮ ಮಂದಿರ ಪೂರ್ಣ

ಅಯೋಧ್ಯೆಯ ಶ್ರೀರಾಮ ಮಂದಿರ ಸಂಕೀರ್ಣದ ನಿರ್ಮಾಣ ಕಾರ್ಯ ಈ ವರ್ಷದ ಅಕ್ಟೋಬರ್ ಅಂತ್ಯಕ್ಕೆ ಕೊನೆಗೊಂಡಿತು. ಮಂದಿರ ನಿರ್ಮಾಣ ಪೂರ್ಣಗೊಂಡ ಸಂಕೇತವಾಗಿ ನವೆಂಬರ್ 25ರಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಮಧ್ವಜದ ಆರೋಹಣ ಮಾಡಿದರು.

## ರಾಣಾ ಭಾರತಕ್ಕೆ

2008ರ ನವೆಂಬರ್ 26ರಂದು ಮುಂಬೈನಲ್ಲಿ ನಡೆದ ಭಯೋತ್ಪಾದನಾ ದಾಳಿಯ ಸಂಚುಕೋರ ಮುವ್ವಾವುರ್ ರಾಣಾನನ್ನು ಏಪ್ರಿಲ್ 9ರಂದು ಅಮೆರಿಕವು ಭಾರತಕ್ಕೆ ಹಸ್ತಾಂತರ ಮಾಡಿತು





## ಮಹಾಕುಂಭ ಮೇಳದಲ್ಲಿ ಭಕ್ತರ ಸಂಗಮ

ಜನವರಿ 13ರಿಂದ ಫೆಬ್ರುವರಿ 26ರವರೆಗೆ ಉತ್ತರ ಪ್ರದೇಶದ ಪ್ರಯಾಗರಾಜ್‌ನ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳ ನಡೆಯಿತು. 12 ವರ್ಷಗಳಿಗೊಮ್ಮೆ ಈ ಬೃಹತ್ ಉತ್ಸವ ನಡೆಯುತ್ತದೆ. 45 ದಿನ ನಡೆದ ಕುಂಭ ಮೇಳದಲ್ಲಿ 60 ಕೋಟಿಗೂ ಹೆಚ್ಚು ಜನರು ಪಾಲ್ಗೊಂಡಿದ್ದರು ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿತ್ತು.

## ಆರ್‌ಎಸ್‌ಎಸ್, ಸಿಪಿಐಗೆ 100 ವರ್ಷ

ರಾಷ್ಟ್ರೀಯ ಸ್ವಯಂ ಸೇವಕ (ಆರ್‌ಎಸ್‌ಎಸ್) ಮತ್ತು ಭಾರತೀಯ ಕಮ್ಯುನಿಸ್ಟ್ ಪಾರ್ಟಿ (ಸಿಪಿಐ) ಈ ವರ್ಷ 100 ವರ್ಷ ಪೂರೈಸಿದವು.

## ಕಾಲ್ತುಳಿತಗಳು

ಈ ವರ್ಷ ದೇಶವನ್ನು ಇನ್ನಿಲ್ಲದಂತೆ ಕಾಡಿದ ಪ್ರಕರಣಗಳೆಂದರೆ ಕಾಲ್ತುಳಿತಗಳು. ಪ್ರಮುಖವಾಗಿ ಒಂಬತ್ತು ಕಾಲ್ತುಳಿತ ಪ್ರಕರಣಗಳು ನಡೆದಿದ್ದು, ಇದರಲ್ಲಿ ಪ್ರಾಣ ಕಳೆದುಕೊಂಡವರನ್ನು ಲೆಕ್ಕ ಹಾಕಿದರೆ, ಆ ಸಂಖ್ಯೆ 125 ದಾಟುತ್ತದೆ.

- **ನವೆಂಬರ್ 1:** ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ಏಕಾದಶಿಯ ದಿನ ಸಂಭವಿಸಿದ ಕಾಲ್ತುಳಿತದಲ್ಲಿ ಒಂಬತ್ತು ಜನರು ಮೃತಪಟ್ಟಿದ್ದರು.
- **ಸೆಪ್ಟೆಂಬರ್ 27:** ತಮಿಳುನಾಡಿನ ಕರೂರಿನಲ್ಲಿ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ರ‍್ಯಾಲಿಯಲ್ಲಿ ಕಾಲ್ತುಳಿತ ಉಂಟಾಗಿ 41 ಜನರು ಕೊನೆಯುಸಿರೆಳೆದಿದ್ದರು.
- **ಜುಲೈ 25:** ಉತ್ತರಾಖಂಡದ ಹರಿದ್ವಾರದ ಮಾನಸ ದೇವಿ ದೇವಾಲಯಕ್ಕೆ ಹೋಗುವ ಪಾದಚಾರಿ ಮಾರ್ಗದಲ್ಲಿ ಉಂಟಾದ ಕಾಲ್ತುಳಿತದಿಂದಾಗಿ ಎಂಟು ಭಕ್ತರು ಸಾವಿಗೀಡಾಗಿದ್ದರು.
- **ಜೂನ್ 29:** ಒಡಿಶಾದ ಜಗದ್ವಿಖ್ಯಾತ ಪುರಿ ಜಗನ್ನಾಥ ರಥಯಾತ್ರೆಯ ಸಂದರ್ಭದಲ್ಲಿ ಗುಂಡಿಚಾ ದೇವಾಲಯದ ಸಮೀಪ ಕಾಲ್ತುಳಿತ ಸಂಭವಿಸಿ ಮೂವರು ಉಸಿರು ಚೆಲ್ಲಿದ್ದರು.
- **ಮೇ 3:** ಗೋವಾದ ಶಿರ್ಗಾವೊದಲ್ಲಿ ಶ್ರೀ ಲೈರಾಯಿ ದೇವಿ ದೇವಾಲಯದ ವಾರ್ಷಿಕ ಜಾತ್ರೆಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಏಳು ಭಕ್ತರು ಕೊನೆಯುಸಿರೆಳೆದಿದ್ದರು.
- **ಫೆ.15:** ದೆಹಲಿಯ ರೈಲ್ವೆ ನಿಲ್ದಾಣದ ಪಾದಚಾರಿ ಮೇಲ್ಸೇತುವೆಯಲ್ಲಿ ದುರಂತ. ಮಹಾ ಕುಂಭ ಮೇಳಕ್ಕೆ ಹೊರಟ್ಟಿದ್ದ 18 ಯಾತ್ರಾರ್ಥಿಗಳು ಅಸುನೀಗಿದ್ದರು.
- **ಜನವರಿ 29:** ಉತ್ತರಪ್ರದೇಶದ ಪ್ರಯಾಗರಾಜ್ ಮಹಾ ಕುಂಭ ಮೇಳದಲ್ಲಿ ಮೌನಿ ಅಮಾವಾಸ್ಯೆ ದಿನ, ಏಕಾಏಕಿ ಭಾರಿ ಸಂಖ್ಯೆಯಲ್ಲಿ ಭಕ್ತರು ಜಮಾಯಿಸಿದ್ದರಿಂದ ಉಂಟಾದ ಕಾಲ್ತುಳಿತದಿಂದಾಗಿ ಕನಿಷ್ಠ 30 ಭಕ್ತರು ಮೃತಪಟ್ಟಿದ್ದರು.
- **ಜನವರಿ 9:** ಆಂಧ್ರಪ್ರದೇಶ ತಿರುಪತಿಯಲ್ಲಿ ವೈಕುಂಠ ದ್ವಾರ ದರ್ಶನದ ಟಿಕೆಟ್ ಕೌಂಟರ್‌ನಲ್ಲಿ ಉಂಟಾದ ಕಾಲ್ತುಳಿತದಲ್ಲಿ ಆರು ಭಕ್ತರು ಸಾವಿಗೀಡಾಗಿದ್ದರು.



ಮಹಾ ಕುಂಭ ಮೇಳದ ಕಾಲ್ತುಳಿತ